1	2	3	4	5
12.	ಹಾಸನ	19	2	21
13.	ಕೊಡಗು	8	-	8
14.	ಕೋಲಾರ	22	-	22
15.	ಮಂಡ್ಯ	46	-	46
16.	ಮೈಸೂರು	27	-	27
17.	ರಾಯಚೂರು	32	-	32
18.	ಶಿವಮೊಗ್ಗ	55	07	62
19.	ತುಮಕೂರು	36	-	36
20.	ಉತ್ತರ ಕನ್ನಡ	35	04	39
	ಒಟ್ಟು	**591**	**47**	**638**

ಬುಡ್ಡರ್ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದು

2950 - ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗರಹೊಳೆಯಲ್ಲಿ ವಾಸಿಸುತ್ತಿರುವ ಬೆಟ್ಟ ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ವಿಚಾರದಲ್ಲಿ ರಾಜ್ಯ ಸರ್ಕಾರವು ಯಾವ ಕ್ರಮ ಕೈಗೊಂಡಿರುತ್ತದೆ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ಬೆಟ್ಟ ಕುರುಬ ಜಾತಿಯನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಜಿಲ್ಲಾ ಪಂಚಾಯತ್ ಕೊಡಗು ಜಿಲ್ಲೆಯಿಂದ ಪ್ರಸ್ತಾವನೆಯು ಬಂದಿದ್ದು ಇದನ್ನು ಇತ್ತೀಚೆಗೆ ಸರ್ಕಾರಿ ಆದೇಶ ಸಂಖ್ಯೆ : ಸಕಇ 245 : ಎಸ್ ಎಡಿ 85 (ಭಾ), ದಿನಾಂಕ 19-5-97ರಲ್ಲಿ ಪುನರ್ ರಚಿತವಾಗಿರುವ ಸಮಿತಿಯ ಮುಂದೆ ಮಂಡಿಸಲಾಗುವುದು.

ಗಂಗಾಮತ ಮತ್ತು ಅದರ 38 ಪರ್ಯಾಯ ಜಾತಿಗಳನ್ನು ಪರಿಶಿಷ್ಟ ಪಂಗಡದ ಗುಂಪಿಗೆ ಸೇರಿಸುವ ಬಗ್ಗೆ

295 - ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ರಾಜ್ಯ ಸರ್ಕಾರ ಗಂಗಾಮತ ಮತ್ತು ಅದರ 38 ಪರ್ಯಾಯ ಜಾತಿಗಳನ್ನು ಹಾಗೂ ಸಿದ್ಧಿ ಜಾತಿಯನ್ನು ಜೊತೆಗೆ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿರುವ

ಕುರುಬ ಜಾತಿ ಮತ್ತು ಕೊಡಗು ಜಿಲ್ಲೆಯಲ್ಲಿರುವ ಮೂಲನಿವಾಸಿ ಹಾಲುಮತದವರನ್ನು ಪರಿಶಿಷ್ಟ ಪಂಗಡದ ಗುಂಪಿಗೆ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಮೇಲ್ಕಂಡ ಜಾತಿ, ಜನಾಂಗಗಳು ಗಿರಿಜನರೆಂದು ನಿಷ್ಕರ್ಷಿಸುವ ಯಾವ ಯಾವ ಅರ್ಹತೆಗಳನ್ನು ಪಡೆದಿರುತ್ತಾರೆ?

ಇ) ಗಿರಿಜನರ ಪಟ್ಟಿಯಲ್ಲಿ ಸೇರಿಸಲು ಇತರ ಜಾತಿಯವರಿಗೆ ಇರಬೇಕಾದ ಕೇಂದ್ರ ಸರ್ಕಾರದ ನಿಯಮಾವಳಿಯ ಮಾನದಂಡಗಳೇನ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಮಂಡಲ್ ಆಯೋಗದ ವರದಿಯಂತೆ ಗಂಗಾಮತ ಮತ್ತು ಅದರ 38 ಪರ್ಯಾಯ ಪಂಗಡಗಳನ್ನು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿಸಲು ಶ್ರೀ ಡಿ.ಕೆ. ನಾಯ್ಕರ್‌ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಉಪ ಸಮಿತಿಯು ಶಿಫಾರಸ್ಸು ಮಾಡಿದ್ದು, ಅದರಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದು, ಅದರಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಬೀದರ್ ಹಾಗು ಗುಲ್ಬರ್ಗಾ ಜಿಲ್ಲೆಗಳಲ್ಲಿ ಇರುವ ಕುರುಬ ಜನಾಂಗವು ಗೊಂದ ಮತ್ತು ರಾಜಗೊಂಡ, ಪಂಗಡಗಳ ಪರ್ಯಾಯವೆಂದು ಪರಿಗಣಿಸಿ ಸದರಿ ಜಾತಿಯನ್ನು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿಸಲು ಶಿಫಾರಸ್ಸು ಮಾಡಲಾಗಿದೆ. ಕೊಡಗು ಜಿಲ್ಲೆಯಲ್ಲಿನ ಮೂಲ ನಿವಾಸಿಗಳಾದ ಹಾಲುಮತ ಕುಟುಬರನ್ನು ಹಾಗು ಉತ್ತರ ಕನ್ನಡ ಜಿಲ್ಲೆಯಲ್ಲಿನ ಸಿದ್ಧಿ ಜನಾಂಗವನ್ನು ಅವರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಪರಿಸ್ಥಿತಿ ಹಿನ್ನೆಲೆಯಲ್ಲಿ ಪರಿಶಿಷ್ಟ ವರ್ಗಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಇ) ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಪರಿಶಿಷ್ಟ ವರ್ಗಕ್ಕೆ ಯಾವುದೇ ಜಾತಿಯನ್ನು ಸೇರಿಸುವಾಗ ಕೆಳಕಂಡ ಮಾನದಂಡಗಳನ್ನು ಪರಿಗಣಿಸಬೇಕಾಗುತ್ತದೆ.

"Cultural geographical isolations shyness of contact with the community at large."

ಅಲ್ಪಸಂಖ್ಯಾತರ ಅಭಿವೃದ್ಧಿಗೆ ಮೀಸಲಿಟ್ಟ ಹಣ.

2953 - ಶ್ರೀ ಹೆಚ್. ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಸಾಲಿನಲ್ಲಿ ಅಲ್ಪಸಂಖ್ಯಾತರರಿಗೆ (ಅವರ ಅಭಿವೃದ್ಧಿಗಾಗಿ) ಎಷ್ಟು ಹಣ ಮೀಸಲಿಡಲಾಗಿದೆ?

ಆ) ಬಿಡುಗಡೆಯಾಗಿರುವ ಹಣವೆಷ್ಟು?